ಕನ್ನಡದಲ್ಲಿ ಬರೆಸಬೇಕಾಗಿತ್ತು' ಎಂದು ಆಕ್ಷೇಪಿಸಿದರು. ಆದರೆ ನಿಸಾರ್ ಅವರು ಮಾತ್ರ, 'ನೀನು ಬರೆಸಿರುವುದು ಸರಿಯಾಗಿಯೇ ಇದೆ. ಯಾಕೆಂದರೆ ಅದನ್ನು ಓದಬೇಕಾದವರು ಅನ್ಯಭಾಷಿಕರೇ ಹೊರತು ಕನ್ನಡಿಗರಗಲ್ಲ' ಎಂದು ಮೆಚ್ಚುಗೆ ಸೂಚಿಸಿದ್ದರು. ಅಂದಿನಿಂದ ನಮ್ಮ ಸಂಬಂಧ ಇನ್ನಷ್ಟು ಗಾಢವಾಯಿತು.

ಸುಮತೀಂದ್ರ ನಾಡಿಗರು ನಮ್ಮ ಅಂಗಡಿಯ ಮುಂದೆಯೇ 'ಕರ್ನಾಟಕ ಬುಕ್ ಹೌಸ್' ಎಂಬ ಪುಸ್ತಕದ ಅಂಗಡಿ ತೆರೆದರು. ಆಗ ಎಂ.ಎನ್. ವ್ಯಾಸರಾವ್, ಗಾಂಧಿ ಬಜಾರ್‌ನಲ್ಲಿ ವಾಸವಾಗಿದ್ದರು. ನಿಸಾರ್ ಅವರು ನಿತ್ಯವೂ ಗಾಂಧಿ ಬಜಾರ್‌ಗೆ ಸಂಜೆ ಬರುತ್ತಿದ್ದರು. ಆ ಭೇಟಿಗೆ 'ಲಿಪಿ ಮುದ್ರಣಾಲಯ'ದ ಬಾ.ಕಿ.ನ. ಅವರೂ ಕಾರಣ. ಸ್ವತಃ ಸಾಹಿತಿಯಾದ ಬಾ.ಕಿ.ನ. ಎಲ್ಲಾ ಸಾಹಿತಿಗಳ ಜೊತೆ ಆತ್ಮೀಯರಾಗಿದ್ದರು. 'ಗಾಂಧಿ ಬಜಾರ್' ಎಂಬ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ನಮ್ಮ ಅಂಗಡಿಯಲ್ಲಿ ನಿಸಾರ್ ಅವರು ಕುಳಿತುಕೊಳ್ಳುವುದು ಸರ್ವೇ ಸಾಮಾನ್ಯವಾಗಿತ್ತು.

ಒಮ್ಮೆ ಅವರು, 'ಬಾಬು, ನಾನು ಲಾಲ್‌ಬಾಗ್ ನೋಡಿ ಬಹಳ ವರ್ಷಗಳಾಗಿದೆ. ಕರ್ಕೊಂಡು ಹೋಗಿ ತೋರಿಸ್ತೀಯಾ?' ಎಂದು ಕೇಳಿದರು. 'ಸರ್, ನಾನ್ಯಾರು ತೋರಿಸಲಿಕ್ಕೆ? ನಿಮ್ಮದೇ ಲಾಲ್‌ಬಾಗ್!' ಎಂದೆ. ಅಂದು ಸಂಜೆ 4 ಗಂಟೆಗೆ ನಾನು ಮತ್ತು ನಿಸಾರ್ ಅವರು ಲಾಲ್‌ಬಾಗ್ ಪ್ರವೇಶಿಸಿದೆವು. ಕೆರೆಯನ್ನು ಒಂದು ಸುತ್ತು ಹಾಕಿದೆವು. ಆ ಕೆರೆಯಲ್ಲಿ ತಾವು ಬಾಲ್ಯದಲ್ಲಿ ಈಜಾಡುತ್ತಿದ್ದುದನ್ನು ನೆನಪಿಸಿಕೊಂಡರು. ಒಮ್ಮೆ ಬ್ರಿಟಿಷ್ ಅಧಿಕಾರಿಗಳು ಓಡಿಸಿಕೊಂಡು ಬಂದಾಗ ಬರಿಮೈಯಲ್ಲಿ ಬೇಲಿ ಹಾರಿ ಮನೆ ಸೇರಿದ್ದನ್ನು ನೆನಪಿಸಿಕೊಂಡು ಗಹಗಹಿಸಿ ನಕ್ಕಿದ್ದರು.

ಲಾಲ್'ಬಾಗ್‌ನಲ್ಲಿ ಪ್ರತಿಯೊಂದು ಮರ ಗಿಡವೂ ಅವರಿಗೆ ಪರಿಚಿತ. ಗುಲಗಂಜಿ ಮರ, ಕೃಷ್ಣ ಬಟ್ಟಲಿನ ಮರ, ಸಿಹಿ ಹುಣಸೆ ಮರ, ಹೀಗೆ ಒಂದೊಂದು ಮರವನ್ನೂ ತೋರಿಸಿ ಅದರ ಬಗ್ಗೆ ವಿವರಿಸಿ ಹೇಳಿದ್ದರು. ಆಗಿನ ನನ್ನ ಪುಟ್ಟ ಫೋನಿನಲ್ಲಿ ಒಂದು ಫೋಟೊವನ್ನು ಕ್ಲಿಕ್ಕಿಸಿಕೊಂಡರು. ಎಲ್ಲ ಮುಗಿದು ಲಾಲ್‌ಬಾಗ್‌ನ ಪಶ್ಚಿಮ ದ್ವಾರದ ಬಳಿ ಬಂದು ದಣಿವಾರಿಸಿಕೊಳ್ಳಲು ಕುಳಿತುಕೊಂಡೆವು. ಆಗ ಅಚಾನಕ್ಕಾಗಿ ಒಂದು ದೊಡ್ಡ ಗುಂಪು (ಸುಮಾರು 20ರಿಂದ 25 ಜನರಿದ್ದರು) ನಮ್ಮನ್ನು ಸುತ್ತುವರಿದು ನಿಸಾರ್ ಅವರನ್ನು ಮಾತನಾಡಿಸಿದರು. ಅವರೆಲ್ಲರೂ ಐಟಿಐ ನಿವೃತ್ತ ನೌಕರರು; ಸಂತೋಷ ಕೂಟಕ್ಕಾಗಿ ಲಾಲ್‌ಬಾಗ್‌ಗೆ ಬಂದಿದ್ದರು. ಎಲ್ಲರೂ ನಿಸಾರರ ಹಸ್ತಾಕ್ಷರ ಪಡೆದು ನಿತ್ಯೋತ್ಸವದ 'ಜೋಗದ ಸಿರಿ' ಹಾಡನ್ನು ಸಾಮೂಹಿಕವಾಗಿ ಸುಶ್ರಾವ್ಯವಾಗಿ ಹಾಡಿದರು. ಅವರೆಲ್ಲರೂ ಹೋದಮೇಲೆ ನಿಸಾರರು, 'ನೋಡಯ್ಯ, ನಾನು ಸಂಪಾದನೆ ಮಾಡಿರುವುದು ಇದನ್ನೇ. ನಾನು ನಾಳೀನೆ ಸತ್ತು ಹೋದರೂ ಪರ್ವಾಗಿಲ್ಲ ಕಣಯ್ಯ! ನನ್ನ ಜನುಮ ಸಾರ್ಥಕವಾಗಿದೆ' ಎಂದರು. 'ಬಿಡ್ತು ಅನ್ನಿ ಸರ್! ನೀವು ಶತಾಯುಷಿಗಳಾಗಬೇಕು!' ಎಂದು ನಾನು ಗಾಬರಿಯಿಂದ ಹೇಳಿದ್ದೆ.

ಒಂದು ಮಧ್ಯಾಹ್ನ ನಿಸಾರ್ ಅವರು ನಮ್ಮ ಮನೆಗೆ ಬರಲು ಒಪ್ಪಿದರು. ಹಾಗೆ ಬಂದವರು ನಮ್ಮ ಮನೆಯ ತಾರಸಿ ತೋಟದಲ್ಲಿ ದೋಸೆ ಮತ್ತು ಕಾಯಿ ಚಟ್ನಿ ಸವಿದರು. ನಮ್ಮ ತಾರಸಿ ತೋಟವನ್ನು ಬಹುವಾಗಿ ಇಷ್ಟಪಟ್ಟರು. ಕೇವಲ ನನಗೆ, ನನ್ನ ಪತ್ನಿ ರೂಪ ಹಾಗೂ ಮಗ ಅರ್ಜುನ್‌ಗೆಂದು ಕವಿತೆ ವಾಚಿಸಿದರು. ಅಂದು ನಮಗಾದ ಸಂತೋಷಕ್ಕೆ ಪಾರವೇ ಇಲ್ಲ. ಆ ಘಟನೆಯ ಸವಿನೆನಪಿಗಾಗಿ ನಮ್ಮ ತಾರಸಿ ತೋಟಕ್ಕೆ 'ನಿತ್ಯೋತ್ಸವ' ಎಂದು ಹೆಸರನ್ನಿಟ್ಟು ಗುರುಗಳ ಫೋಟೊ ಹಾಕಿದ್ದೇನೆ.

ಒಮ್ಮೆ ಟ್ಯಾಗೋರ್ ಪಾರ್ಕ್‌ನಲ್ಲಿ ಕುಳಿತಿದ್ದಾಗ, 'ಏನಪ್ಪಾ, ಈ ಪಾರ್ಕಿನಲ್ಲಿ ಡಿವಿಜಿ, ಅಡಿಗರಂಥ ದೊಡ್ಡ ದೊಡ್ಡ ಸಾಹಿತಿಗಳು ಬಂದು ಕುಳಿತು ಹೋಗ್ತಿದ್ರು. ಈ ಪಾರ್ಕ್ ಯಾಕೆ ಇಷ್ಟೊಂದು ಹಾಳಾಗಿದೆ, ಅಣ್ಣಯ್ಯ ಇಲ್ಲವೇ?' ಎಂದಿದ್ದರು. ಯುವಕ ಸಂಘದ ಅಣ್ಣಯ್ಯ ಟ್ಯಾಗೋರ್ ಪಾರ್ಕ್